19) ಬಿಜಾಪುರ ಹಾಗೂ ಕಾರವಾರಗಳಲ್ಲಿ ಪದವಿಯೋತ್ತರ ವ್ಯಾಸಂಗವನ್ನು ಪ್ರಾರಂಭಿಸುವ ಬಗ್ಗೆ ಅನುಮತಿ ಹಾಗೂ ಆರ್ಥಿಕ ಸಹಾಯದ ಬಗ್ಗೆ

ಶ್ರೀ ಎಂ. ಎಲ್. ಉಸ್ತಾರ್.—ಮಾನ್ಯ ಸಭಾಧ್ಯಕ್ಷರೇ, ೧೯೬೭–೬೮ನೇ ಸಾಲಿನಿಂದ ಬಿಜಾಪುರ ಹಾಗೂ ಕಾರವಾರಗಳಲ್ಲಿ ಪದವಿಯೋತ್ತರ ವ್ಯಾಸಂಗವನ್ನು ಪ್ರಾರಂಭಿಸುವ ಬಗ್ಗೆ ವಿಶ್ವವಿದ್ಯಾಲಯ ಸಹಾಯಧನ ಆಯೋಗಕ್ಕೆ ಈಗಾಗಲೇ ಶಿಫಾರಸ್ಸನ್ನು ಕಳುಹಿಸಿದ್ದು, ಈ ಕೇಂದ್ರಗಳನ್ನು ಪ್ರಾರಂಭಿಸುವ ಬಗ್ಗೆ ಅನುಮತಿ ಹಾಗೂ ಅವಶ್ಯಕ ಆರ್ಥಿಕ ಸಹಾಯಕ್ಕಾಗಿ ಸರಕಾರವನ್ನು ಕೋರಿದ್ದಾಗ್ಯೂ ಈವರೆಗೂ ಆ ಬಗ್ಗೆ ಯಾವ ಕ್ರಮವನ್ನೂ ಕೈಕೊಳ್ಳದಿರುವುದರಿಂದ ಕೂಡಲೇ ಅನುಮತಿ ಹಾಗೂ ಅವಶ್ಯಕ ಆರ್ಥಿಕ ಸಹಾಯವನ್ನು ನೀಡಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ (ಉನ್ನತ ಶಿಕ್ಷಣ ಮಂತ್ರಿಗಳ ಪರವಾಗಿ).—ಮಾನ್ಯ ಸಭಾಧ್ಯಕ್ಷರೇ ಈ ವಿಷಯದ ಬಗ್ಗೆ ವಿಶ್ವವಿದ್ಯಾಲಯ ಆನುದಾನ ಆಯೋಗ (ಯು.ಜಿ.ಸಿ) ಕ್ಕೆ ಕಳುಹಿಸಲಾಗಿದ್ದು ಅವರಿಂದ ಇನ್ನೂ ಉತ್ತರ ಬಂದಿರುವುದಿಲ್ಲ, ಆ ಉತ್ತರ ಬಂದ ನಂತರ ತಕ್ಷಣವೇ, ಪದವಿಯೋತ್ತರ ವ್ಯಾಸಂಗವನ್ನು ಪ್ರಾರಂಭ ಮಾಡುವುದಕ್ಕೆ ನಾವು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇವೆ

ಅಧ್ಯಕ್ಷರು.—ಈಗ ಶ್ರೀ ಎಂ. ವೀರಯ್ಯ ಸ್ವಾಮಿ ಅವರ ಪರವಾಗಿ ಶ್ರೀ ಮುಲಕಯ್ಯ ಗುತ್ತೇದಾರ್ ಅವರು ಹೇಳಿಕೆಯನ್ನು ಓದುತ್ತಾರೆ.

20) ಜಿಲ್ಲಾ ಪರಿಷತ್ ಕಾಮಗಾರಿಗಳಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರಿಗೆ ದಿನಗೂಲಿಯಲ್ಲಿ ತಾರತಮ್ಯದ ಬಗ್ಗೆ

ಶ್ರೀ ಮುಲಕಯ್ಯ ಗುತ್ತೇದಾರ್.—ಸನ್ಮಾನ್ಯ ಸಭಾಧ್ಯಕ್ಷರೇ, ರಾಜ್ಯದಲ್ಲಿ ಹೊಸದಾಗಿ ಜಿಲ್ಲಾ ಪರಿಷತ್ ವ್ಯವಸ್ಥೆ ಬಂದ ಮೇಲೆ ಜಿಲ್ಲಾ ಪರಿಷತ್ ಕಾಮಗಾರಿಗಳಾಗಿ ಲೋಕೋಪಯೋಗಿ ಇಲಾಖೆಯನ್ನು ಹೊರತು ಪಡಿಸಿ ತಾಂತ್ರಿಕ ವಿಭಾಗವನ್ನು ತೆರೆಯಲಾಗಿದೆ. ಈ ರೀತಿ ಹೊಸದಾಗಿ ಪ್ರಾರಂಭಿಸಿರುವ ತಾಂತ್ರಿಕ ವಿಭಾಗ, ಉಪ ವಿಭಾಗಗಳು ಮೊದಲಿನ ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆ. ಹಾಗೂ ಕೆರು ನೀರಾವರಿ ಇಲಾಖೆಯಿಂದ ಬಂದ ಅನೇಕ ದಿನಗೂಲಿ ನೌಕರರು ಕೆಲಸ ಮಾಡುತ್ತಿದ್ದಾರೆ ಆದರೆ ಕೆಲಸ ಮಾಡುವ ಹೊಣೆಗಾರಿಕೆ ಒಂದೇ ಯಾಗಿದ್ದರೂ ಅವರಿಗೆ ಕೊಡುವ ದಿನಗೂಲಿಯಲ್ಲಿ ತಾರತಮ್ಯವಿದೆ. ಈ ಬಗ್ಗೆ ನನ್ನ ತಾಲ್ಲೂಕಿನ ಉಪವಿಭಾಗದ ನೌಕರರು ಚಳಿಂವಳಿ ನಡೆಸಿದ್ದು ದಿನಗೂಲಿಯ ತಾರತಮ್ಯ ಹೋಗಲಾಡಿಸಲು ಕೇಳಿಕೊಂಡಿದ್ದಾರೆ. ಸರಕಾರ ಕೂಡಲೇ ಸಮಾನ ರೂಪವಾದ ದಿನಗೂಲಿ ಕೊಡಲು ಆದೇಶ ಕೊಡಬೇಕಾಗಿ ವಿನಂತಿ.

೨-೩೦ ಪಿ. ಎಂ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಈ ವಿಷಯಕ್ಕೆ ಸಂಬಂಧಪಟ್ಟ ಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ. ಆದ್ದರಿಂದ ಅವರಿಗೆ ಈ ವಿಷಯವನ್ನು ತಿಳಿಸಿ ಮಾನ್ಯ ಸದಸ್ಯರಿಗೆ ಕೂಡಲೇ ಈ ಬಗ್ಗೆ ಉತ್ತರ ಒದಗಿಸಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ. ನೆನ್ನೆ ದಿವಸ ಮಾನ್ಯ ಕಾನಡೆ ಅವರು ಇಲ್ಲಿ ಬಳಸಿದ ಪದದ ಬಗ್ಗೆ ತಾವು ರೂಲಿಂಗ್ ಕೊಡುತ್ತೇನೆಂದು ಹೇಳಿದ್ದಿರಿ, ಆದ್ದರಿಂದ ತಾವು ರೂಲಿಂಗ್ ಕೊಡಬೇಕು?

ಅಧ್ಯಕ್ಷರು.—ನಾನು ರೂಲಿಂಗ್ ಕೊಡುತ್ತೇನೆ. ತಾವು ಕುಳಿತುಕೊಳ್ಳಿ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ನಾರಾಯಣಕುಮಾರ್ ಅವರು ಎಲ್ಲಿ ನೆನ್ನೆ ದಿವಸ ಬಳಸಿದ ಪದದ ಬಗ್ಗೆ ನೀವು ನೆನ್ನೆ ದಿವಸವೇ ರೂಲಿಂಗ್ ಕೊಟ್ಟಿರಿ. ಆದರೆ ಇವರ ಕೇಸ್‌ನಲ್ಲಿ ಏತಕ್ಕೆ ನಿಧಾನ ಮಾಡುತ್ತೀರಿ? ಈ ಒಂದು ತಾರತಮ್ಯ ಏತಕ್ಕೆ?

ಅಧ್ಯಕ್ಷರು.— ನಾನು ರೂಲಿಂಗ್ ಇವೊತ್ತೇ ಕೊಡಬಹುದು ಅಥವಾ ನಾಳೆ ಕೊಡಬಹುದು. ಅದನ್ನು ನೀವು ಪ್ರಶ್ನೆ ಮಾಡುವಂತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಅದು ಅಧ್ಯಕ್ಷರಿಗೆ ಬಿಟ್ಟದ್ದು.

ಶ್ರೀ ಬಿ. ಗಂಗಣ್ಣ.—ನಾನು ಮೊನ್ನೆದಿವಸ ಕೊಟ್ಟ ನೋಟೀಸ್‌ಗೆ ತಾವು ಏನೂ ಹೇಳಲಿಲ್ಲ.

ಅಧ್ಯಕ್ಷರು.—ನೆನ್ನೆದಿವಸ ಅದನ್ನು ತೆಗೆದುಕೊಂಡಾಗ ನೀವು ಸಭೆಯಲ್ಲಿ ಇರಲಿಲ್ಲ. ಆದ್ದರಿಂದ ತಾವು ಮತ್ತೆ ಒಂದು ನೋಟೀಸ್ ಕೊಡಿ. ನಾಳೆ ಅದನ್ನು ತೆಗೆದುಕೊಳ್ಳುತ್ತೇನೆ.

ಶಾಸನ ರಚನೆ

1987ನೇ ಇಸವಿಯ ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಜಿ. ಎಸ್. ಬಾಗಲಕೋಟಿ (ಅರಣ್ಯ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''೧೯೮೭ನೇ ಇಸವಿಯ ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ. * ೧

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

೧೯೮೭ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳ ಪರವಾಗಿ ೧೯೮೭ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೭ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳ ಪರವಾಗಿ ೧೯೮೭ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ. * ೨ ಈಗ ಶ್ರೀಮತಿ ನಾಗರತ್ನಮ್ಮನವರು ೧೯೮೭-೮೮ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಬಹುದು.

ANNEXURE * ೧, * ೨